**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ .ಎಂ. ಎಫ್ .ಸಿ. ಕನಕಪುರ.**

**C.C. 1648/2020**

CW-1 PW-2

| | | |
|---|---|---|
| ಹೆಸರು | ಃ | ಅನಂತರಾಮ್ |
| ತಂದೆಯ ಹೆಸರು | ಃ | ಅನಂತಯ್ಯ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | CPI |
| ವಾಸ | ಃ | ಕನಕಪುರ |

**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ ದಿನಾಂಕ 19.06.2026**

ನಾನು 2021 ರ ಸಾಲಿನಲ್ಲಿ 7 ತಿಂಗಳ ಕಾಲ ಕನಕಪುರ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ PSI ಆಗಿ ಕರ್ತವ್ಯ ನಿರ್ವಹಿಸಿದ್ದೇನೆ .

ದಿನಾಂಕ 28.09.2020 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ನಾನು ಗಂಟೆಗೆ ನಾನು ಠಾಣೆಯಲ್ಲಿ ಇರುವಾಗ ಬಾತ್ಮೀದಾರರಮುಖಾಂತರ ದೊಡ್ಡ ತಾಂಡ್ಯ ಗ್ರಾಮದ ಬಳಿ ಕೃಷಾ ನಾಯಕ್ ಎಂಬ ವ್ಯಕ್ತಿ ತಮ್ಮಅಂಗಡಿಯ ಮುಂಭಾಗದಲ್ಲಿ ಬೆಂಚಿನ ಕೆಳಗಡೆ ಬಿಳಿ ಚೀಲದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದಾಗಿ ಬಾತ್ಮೀ ನೀಡಿರುತ್ತಾರೆ. ನಾನು ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಸದರಿ ಬಾತ್ಮೀಯ ವಿಚಾರವನು ತಿಳಿಸಿ ಧಾಳಿ ಸಹಕರಿಸಲು ಕೋರಿದ್ದರಿಂದ ಪಂಚರು ಒಪ್ಪಿ ರುತ್ತಾರೆ. ನಂತರ 4.15 ಗಂಟೆ ಸಮಯಕ್ಕೆ KA-42-G-923 ವಾಹನದಲ್ಲಿ ನಾನು ಸಿಬ್ಬಂದಿಗಳಾದ ಚಾಸಾ-4 ರಿಂದ 6 ರವರು ಹಾಗೂ ಚಾಸಾ-2 ಮತುತ 3 ರವರಜೊತೆ 4.15 ಕ್ಕೆ ಹೊರಟು 4.30 ಗಂಟೆ ಗೆ ಘಟನಾ ಸ್ಥಳಕ್ಕೆ ತಲುಪಿ, ಮರೆಯಲ್ಲಿ ನಿಂತು ನೋಡಿದಾಗ , ಆರೋಪಿಯು ಮದ್ಯವನ್ನು ಅಂಗಡಿಯ ಹೊರಭಾಗದಲ್ಲಿ

ಮಾರಾಟ ಮಾಡುವುದನು ನೋಡಿ ಖಚಿತಪಡಿಸಿಕೊಂಡು, ನಾವು ಮತ್ತು ಸಿಬ್ಬಂದಿಗಳು ಧಾಳಿ ಮಾಡಲಾಗಿ ಸಮವಸ್ತ್ರದಲ್ಲಿದ್ದ ನಮ್ಮನ್ನು ಆರೋಪಿ ನೇಡಿ ಹೆದರಿ ಓಡಿ ಹೋಗಿರುತ್ತಾನೆ.

ಬೆಂಚಿನ ಕೆಳಗಡೆ ಇದ್ದ ಒಂದು ಬಿಳಿ ಚೀಲವನ್ನು ಪರಿಶೀಲಿಸಲಾಗಿ Hywards cheers whisky ಯ 90 ಎಂ ಎಲ್ ನ 58 ಸ್ಯಾಚೆಟ್ ಗಳು ಇದ್ದು , ಪ್ರತಿ ಸ್ಯಾಚೆಟ್ ನ ಬೆಲೆ 35 ರೂಪಾಯಿ 13 ಪೈಸೆ ಆಗಿದ್ದು , ಒಟ್ಟು 5 ಲೀ. 220 ಎಂ ಎಲ್ , ಒಟ್ಟು ಮೌಲ್ಯ 2,037 ಆಗಿದ್ದು , ಅದರಲ್ಲಿ ಒಂದು ಸ್ಯಾಚೆಟ್ ಅನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಎಸ್ ಎಂಬ ಅಕ್ಷರದಿಂದ ಸೀಲ್ ಅನ್ನು ಹಾಕಿ, ಪಂಚರ ಸಹಿಯನ್ನು ಪಡೆದಿರುತ್ತೇವೆ. ಉಳಿದ ಮದ್ಯವನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇವೆ.

ನಂತರ ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಣೆ ಮಾಡಲಾಗಿ ಆತನ ಹೆಸರು ಕೃಷ್ಣ ನಾಯಕ್ ಬಿನ್ ಗೋವಿಂದ ನಾಯಕ್ ಎಂದು ದೃಢಪಡಿಸಿಕೊಂಡು ಠಾಣೆಗೆ ಹಾಜರಾಗಿ ಸ್ವ ವರದಿಯನ್ನು ದಾಖಲು ಮಾಡಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಸಂಜೆ 4.30 ಗಂಟೆಯಿಂದ 5.30 ಗಂಟೆಯವರೆಗೆ ಮಾಡಿದ್ದು , ಪಂಚರ ಸಹಿಯನ್ನು ಪಡದಿರುತ್ತೇವೆ.

ನಂತರ ವಶಪಡಿಸಿಕೊಂಡ ಮಾಲುಗಳನ್ನು ಮಾಲು ಪಟ್ಟಿ ಸಂಖ್ಯೆ 104/20 ರಲ್ಲಿ ದಾಖಲಿಸಿ FIR ಅನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಅದೇ ದಿನ ಪಂಚಾಯಿತದಾರ ಚಾಸಾ-2 ಮತ್ತು 3ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 29.09.2020 ರಂದು ತನಿಖೆಯನ್ನು ಮುಂದುವರೆದು ಚಾಸಾ-4 ರಿಂದ 6 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕ 01.10.2020 ರಂದು ತನಿಖೆಯನ್ನು ಮುಂದುವರೆಸಿ ಅಮಾನತ್ತು ಜಪಡಿಸಿಕೊಂಡಿರುವ ಮದ್ಯ ದಲ್ಲಿ FSL ಗೆ ಕಳುಹಿಸಿಕೊಡಲು ವಶಪಡಿಸಿಕೊಂಡಿರುವ ವಸ್ತುವನ್ನು ಬಿಟ್ಟು ಉಳಿದವನ್ ನುಅಬಕಾರಿ ಇಲಾಖೆಗೆ ವರ್ಗಾವಣೆ ಕೊಡಲು ಮನವಿ ಮಾಡಿರುತ್ತೇನೆ. ಅದೇ ದಿನ ಅಮಾನತ್ತು ಪಡಿಸಿಕೊಂಡಿರುವ ಮದ್ಯವನ್ನು FSL ಗೆ ಕೊಟ್ಟು ಬರಲು SP ಹಾಗೂ CPI ರವರ ಅನುಮೋದನೆಯನ್ನು ಚಾಸಾ-7 ರವರು ಪಡೆದಿರುತ್ತಾರೆ.

ದಿನಾಂಕ 05.10.2020ರಂದು ಪ್ರಕರಣದ ತನಿಖೆಯನ್ನು ಮುಂದುವರೆಸಿ ಮಡಿವಾಳದಲ್ಲಿರುವ FSL ಗೆ ಮದ್ಯವನ್ನು ಚಾಸಾ-7 ರವರ ಮುಖಾಂತರ ಕಳುಹಿಸಿರುತ್ತೇನೆ. ಸ್ವೀಕೃತಿ ಪ್ರತಿಯನ್ನು ಪಡೆದಿರುತ್ತೇನೆ.

ದಿನಾಂಕ 09.10.2020 ರಂದು ರಾಮನಗರ ಜಿಲ್ಲಾ ಉಪ ಆಯುಕ್ತರ ಆದೇಶದ ಮೇರಗೆ ವಶಪಡಿಸಿಕೊಂಡ ಮದ್ಯವನ್ನು ಕನಕಪುರ ಅಬಕಾರಿ ಕಛೇರಿಗೆ ನೀಡಿ ಸ್ವೀಕೃತಿ ಪ್ರತಿಯನ್ನು ಪಡೆದಿರುತ್ತೇನೆ.

ದಿನಾಂಕ 27.10.2020 ರಂದು ಪ್ರಕರಣದ ಆರೋಪಿಯನ್ನು ಎರಡನೇ ಅಪರ ಜಿಲ್ಲಾ ಸತ್ರ ನ್ಯಾಯಲಾಯದಲ್ಲಿ ನಿರೀಕ್ಷಣಾ ಜಮೀನು ಪಡೆದು ಠಾಣೆಗೆ ಹಾಜರಾಗಿರುತ್ತಾರೆ. ಸೂಕ್ತ ದಸ್ತಗಿರಿ ಕ್ರಮ ಜರುಗಿಸಿ ಬಿಡುಗಡೆ ಮಾಡಿರುತ್ತೇನೆ. ಪ್ರಕರಣದಲ್ಲಿ FSL ವರದಿಯನ್ನು ಪಡೆಯುವ ಮುಂಚೆ ಅಂತಿಮ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿದಾರರು ನಿಪಿ-1 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು.

ಸಾಕ್ಷಿದಾರರು FIR ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು.

ಸಾಕ್ಷಿದಾರರು ಹೇಳಿಕೆಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ರಿಂದ 8 ಎಂದು ಗುರತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-3 ಎ ಮತ್ತು 8 ಎ ಎಂದು ಗುರುತಿಸಲಾಯಿತು.

ಸಾಕ್ಷಿದಾರರು ಹಿಂಬರಹವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು ಗುರತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-9 ಎ ಎಂದು ಗುರುತಿಸಲಾಯಿತು.

ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಮು.ಮಾ 1 ಮತ್ತು 2 ಅನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಶ್ರೀ VM ವಕೀಲರಿಂದಃ**

ನೀವು ಠಾಣೆಯಲ್ಲಿದ್ದಾಗ ಬಂದ ಮಾಹಿತಿ ಮೇರೆಗೆ ಪಂಚರಿಗೆ ನೋಟಿಸ್ ನೀಡಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿದಾರರು ಕಲ್ಲಹಳ್ಳಿಯವರು ಆಗಿರುತ್ತಾರೆ. ಸಾಕ್ಷಿದಾರರು ಠಾಣೆಯ ಮುಂದೆಯೇ ಇದ್ದರು . ಠಾಣೆಯನ್ನು ಬಿಟ್ಟ ಮೇಲೆ ನೀವು

ಬೇರ ಕಡೆ ಗಸ್ತು ಮಾಡಿರುತ್ತೀರಾ ಎಂದರೆ ನೇರವಾಗಿ ಘಟನಾ ಸ್ಥಳಕ್ಕೆ ಹೋಗಿರುವುದಾಗಿ ನುಡಿಯುತ್ತಾರೆ. ಅಂಗಡಿಯಿಂದ 60 ಮೀ ದೂರದಲ್ಲಿ ವಾಹನವನ್ನು ನಿಲ್ಲಿಸಿರುತ್ತೇವೆ. ಆರೋಪಿ ನಿಮ್ಮನ್ನು ನೋಡಿ ಓಡಿ ಹೋದಾಗ ಅವನನ್ನು ಹಿಡಿಯಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಅಕ್ಕ ಪಕ್ಕ ಮನೆ ಇದ್ದ ಕಾರಣ ತಪ್ಪಿ ಸಿಕೊಂಡಿರುವುದಾಗಿ ನುಡಿಯುತ್ತಾರೆ. ಆರೋಪಿ ಸ್ಥಳದಲ್ಲಿ ಇರಲಿಲ್ಲ , ಆರೋಪಿ ವಯಸ್ಸಾದ ವ್ಯಕ್ತಿ ಆಗಿದ್ದು ಆ ರೀತಿ ಓಡಿ ಹೋಗಿದ್ದರೆ ಆತನನ್ನು ಹಿಡಿಯಬಹುದಿತ್ತು ಎಂದರೆ ಸರಿಯಲ್ಲ.

ಅಂಗಡಿ ಮನೆಗೆ ಹೊಂದಿಕೊಂಡಂತೆ ಇತ್ತು. ಅಂಗಡಿ ಮನೆಯ ಯಾವ ಭಾಗದಲ್ಲಿತ್ತು ಎಂದರೆ ಸಾಕ್ಷಿದಾರರು ಪೂರ್ವ ದಿಕ್ಕಿಗೆ ಸಿಮೆಂಟ್ ರಸ್ತೆ ಇತ್ತು , ಅಂಗಡಿ ಪೂರ್ವ ದಿಕ್ಕಿಗೆ ಮುಖ ಮಾಡಿತ್ತು ಎಂದು ನುಡಿಯುತ್ತಾರೆ. ಮನೆ ಎಷ್ಟು ಅಳತೆಯಲ್ಲಿತ್ತು ಎಂದರೆ ಗೊತ್ತಿಲ್ಲ. ಅಂಗಡಿಯ ವಿಸ್ತೀರ್ಣ ಎಷ್ಟು ಇತ್ತು ಎಂದರೆ ಸಾಕ್ಷಿದಾರರು ಅಂಗಡಿಯ ಹೊರಗಡೆ ಘಟನ ನಡೆದ ಕಾರಣ ಅಂಗಡಿಯ ವಿಸ್ತೀರ್ಣ ವನ್ನು ಪರಿಶೀಲನೆ ಮಾಡಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ವಾರಂಟೆ ಪಡೆದು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿದಾರರು ಘಟನೆ ಅಂಗಡಿಯ ಹೊರಗಡೆ ನಡೆದಿತ್ತು ಎಂದ ನುಡಿಯುತ್ತಾರೆ. ಮದ್ಯವು ಬಿಳಿ ಬಣ್ಣದ ಚೀಲ ದಲ್ಲಿ ಇತ್ತು ಎಂದು ನುಡಿಯುತ್ತಾರೆ.

ಮಹಜರ್ ಮಾಡಿದ ಸ್ಥಳದಲ್ಲಿ ಸುತ್ತ ಮನೆ ಇದೆ ಎಂದರೆ ಸರಿ . ಆ ದಿನ ಅಕ್ಕ ಪಕ್ಕದ ಮನೆಯವರು ಬಂದು ಸೇರಿದ್ದರು ಎಂದರೆ ಸರಿ . ಮಹಜರ್ ಮಾಡುವ ಸಮಯದಲ್ಲಿ ಗ್ರಾಮಸ್ಥರ ಸಹಿ ಪಡೆಯಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿದಾರರು ಗ್ರಾಮಸ್ಥರು ಸಹಿ ಮಾಡಲು ತೊಂದರೆ ಆಗುತ್ತದೆ ಎಂದು ನುಡಿದಿರುವುದಾಗಿ ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ನೀವು ಮಹಜರ್ ಮಾಡಿರುವುದಿಲ್ಲ , ಠಾಣೆಯಲ್ಲಿ ಮಹಜರ್ ಮಾಡಿರುತ್ತೀರ ಎಂದರೆ ಸರಿಯಲ್ಲ. ಅಂಗಡಿ ಯಾರಿಗೆ ಸೇರಿರುತ್ತದೆ ಎನ್ನು ವ ಸಂಬಂಧ ದಾಖ್ಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ರೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಆರೋಪಿ ಯಾವುದೇ ಮದ್ಯವನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಆರೋಪಿಯ ಬಳಿ ಯಾವುದೇ ಮದ್ಯದ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಗೆ ಸಾಕ್ಷಿಗಳ ಹೇಳಿಕೆಯನ್ನು ಠಾಣೆಯಲ್ಲಿ ಪಡೆದಿರುತ್ತೀರಿ ಎಂದರೆ ಸರಿ . ನೀವು ಯಾವುದೇ ಮದ್ಯವನ್ನು ಹಾಗೂ ಅಮಾನತ್ತು ಪಡಿಸಿಕೊಂಡ ಮದ್ಯದ ಸ್ಯಾಂಪಲ್ ಅನ್ನು FSL ಗೆ

ಕಳುಹಿಸಿರುವುದಿಲ್ಲ ಎಂದರೆ ಸರಿ . ಆ ದಿನ ಆರೋಪಿ ಯಾವುದೇ ಮದ್ಯವನ್ನು ಮಾರಾಟ ಮಾಡುತ್ತಿರಲಿಲ್ಲ , ನಿಮ್ಮ ಠಾಣಾ ಅಂಕಿ ಅಂಶಕ್ಕಾಗಿ ನಿಮ್ಮ ಠಾಣೆಯಲ್ಲಿದ್ದ ಮದ್ಯವನ್ನು ಬಳಸಿಕೊಂಡು ಆರೋಪಿ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ